ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

DTE-CDC0CDC1/3/2020-JD CDC-DEPT TECH EDUCATION(Computer No. E 322924)

ಆಯುಕ್ತರ ಕಚೇರಿ,
ತಾಂತ್ರಿಕ ಶಿಕ್ಷಣ ಭವನ
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ: 12/09/2022

## ಜ್ಞಾಪನ

ವಿಷಯ: 2022-23ನೇ ಸಾಲಿನಿಂದ ರಾಜ್ಯದ 5ನೇ ಮತ್ತು 6ನೇ ಸೆಮಿಸ್ಟರ್ ಡಿಪ್ಲೊಮಾ ಪ್ರೋಗ್ರಾಂಗಳಿಗೆ C-20 ಪರಿಷ್ಕೃತ ಪಠ್ಯಕ್ರಮಗಳನ್ನು ಅಳವಡಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪತ್ರ ಸಂ.ಇಡಿ 112 ಟಿಪಿಇ 2019, ದಿನಾಂಕ: 10/08/2020.
2. ಸರ್ಕಾರದ ಪತ್ರ ಸಂ.ಇಡಿ 172 ಟಿಪಿಇ 2020, ದಿನಾಂಕ: 22/12/2020.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈಗಾಗಲೇ ಉಲ್ಲೇಖ(1)ರ ಸರ್ಕಾರದ ಪತ್ರದಲ್ಲಿ ರಾಜ್ಯದ ಡಿಪ್ಲೊಮಾ ಪ್ರೋಗ್ರಾಂಗಳಿಗೆ 2020-21ನೇ ಸಾಲಿನಿಂದ ಪರಿಷ್ಕೃತ ಪಠ್ಯಕ್ರಮಗಳನ್ನು ಅಳವಡಿಸಲು ಅನುಮತಿಸಲಾಗಿದೆ. ಪರಿಷ್ಕೃತ ಪಠ್ಯಕ್ರಮಗಳ ನಿಯಮಾವಳಿ/ರೂಪುರೇಷೆಗಳನ್ನು ಉಲ್ಲೇಖ(2)ರಲ್ಲಿನ ಸರ್ಕಾರದ ಆದೇಶದಲ್ಲಿ ಪ್ರಕಟಿಸಲಾಗಿದೆ.

ಮುಂದುವರೆದು, ವಿವಿಧ ತಾಂತ್ರಿಕ ಮತ್ತು ಔದ್ಯೋಗಿಕ ಕ್ಷೇತ್ರಗಳಲ್ಲಿನ ವಿಷಯ ಪರಿಣಿತರ ಸಹಯೋಗದಿಂದ ಪರಿಷ್ಕರಿಸಿದ C-20 ಡಿಪ್ಲೊಮಾ ಪಠ್ಯಕ್ರಮಗಳ 5ನೇ ಸೆಮಿಸ್ಟರ್ ಮತ್ತು 6ನೇ ಸೆಮಿಸ್ಟರ್-Internship/Project ಪಠ್ಯಕ್ರಮಗಳನ್ನು ಆಯುಕ್ತಾಲಯದ ಜಾಲತಾಣ https://www.dtek.karnataka.gov.in ದಲ್ಲಿ ಪ್ರಕಟಿಸಲಾಗಿದೆ.

C-20 ಡಿಪ್ಲೊಮಾ ಪಠ್ಯಕ್ರಮಗಳ ಪ್ರಕಾರ, 5ನೇ ಸೆಮಿಸ್ಟರ್ ಪಠ್ಯಕ್ರಮಗಳಲ್ಲಿ ವಿದ್ಯಾರ್ಥಿಗಳು ಯಾವುದಾದರೂ ಒಂದು Pathway ಪಠ್ಯವಿಷಯವನ್ನು ಆಯ್ಕೆ ಮಾಡಬೇಕಾಗಿರುತ್ತದೆ. ಈ ಬಗ್ಗೆ ಸಂಬಂಧಪಟ್ಟ ಪ್ರೋಗ್ರಾಂ ವಿಭಾಗಾಧಿಕಾರಿಗಳು ಮತ್ತು ಉಪನ್ಯಾಸಕರುಗಳು, 5ನೇ ಸೆಮಿಸ್ಟರ್ ಪ್ರಾರಂಭದ ಮೊದಲ ವಾರದಲ್ಲಿ Pathway ಪಠ್ಯವಿಷಯದ ಸಂಬಂಧ ಸಂಪೂರ್ಣ ಮಾಹಿತಿಯನ್ನು ನೀಡಿ, ಇಚ್ಛಿಸಿದ Pathway ಪಠ್ಯವಿಷಯವನ್ನು ಆಯ್ಕೆ ಮಾಡುವಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಬೇಕಾಗಿ ಸೂಚಿಸಲಾಗಿದೆ. ವಿದ್ಯಾರ್ಥಿಗಳು ಯಾವುದೇ Pathway ಪಠ್ಯವಿಷಯವನ್ನು ಆಯ್ಕೆ ಮಾಡಿದ್ದರೂ, ಲ್ಯಾಟರಲ್ ಎಂಟ್ರಿ ಮುಖೇನ ಬಿ.ಇ ವ್ಯಾಸಂಗದ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ. ಮುಂದುವರೆದು ವಿದ್ಯಾರ್ಥಿಗಳು 5ನೇ ಸೆಮಿಸ್ಟರ್ ನಲ್ಲಿ ಆಯ್ಕೆ ಮಾಡಿದ Pathway ಪಠ್ಯವಿಷಯದಲ್ಲೇ, Internship / Project ನ್ನು 6ನೇ ಸೆಮಿಸ್ಟರ್ ನಲ್ಲಿ ಮಾಡಬೇಕಾಗಿರುತ್ತದೆ.

5ನೇ ಸೆಮಿಸ್ಟರ್ ಪಠ್ಯಕ್ರಮಗಳ ಭೋಧನಾ ಕಾರ್ಯಭಾರಗಳನ್ನು ಆದ್ಯತೆ ಮೇರೆಗೆ ಪೂರ್ಣಕಾಲಿಕ ಉಪನ್ಯಾಸಕರುಗಳಿಗೆ ಮಾತ್ರ ಹಂಚಿಕೆಮಾಡುವಂತೆ ಸಂಸ್ಥೆಗಳ ಪ್ರಾಚಾರ್ಯರಿಗೆ ಸೂಚಿಸಲಾಗಿದೆ.

ಆಯುಕ್ತರು

ಇವರಿಗೆ:
ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಪ್ರಾಚಾರ್ಯರುಗಳಿಗೆ- ಸೂಕ್ತ ಕ್ರಮಕ್ಕಾಗಿ.

ಪ್ರತಿ:
1. ನಿರ್ದೇಶಕರು, ಜಂಟಿ ನಿರ್ದೇಶಕರು (ಆಡಳಿತ)/ (ಪರೀಕ್ಷೆ)/ (ತನಿಖೆ)/(ಯೋಜನೆ): ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು- ಸೂಕ್ತ ಕ್ರಮಕ್ಕಾಗಿ.
2. ಇ-ಆಡಳಿತ ವಿಭಾಗ- ಇಲಾಖಾ ಜಾಲತಾಣದಲ್ಲಿ ಪರಿಷ್ಕೃತ ಪಠ್ಯಕ್ರಮಗಳ ಜೊತೆ ಪ್ರಕಟಿಸಲು.